ಹಿಡಿದುಕೊಂಡುಬಿಡುತ್ತಾರೆ. ಈ ಸಾರಿ ರೈತರಿಗೆ ನಷ್ಟವಾಗಿದೆ, ಅವರು ಮಾರಲಿಕ್ಕೆ ಹೋದರೆ ಹಿಡಿದು ಕೊಳ್ಳುತ್ತಾರೆ. ನಮ್ಮ ಜಿಲ್ಲೆಯ ರೈತರಿಗೆ ಬಹಳ ಕಷ್ಟವಾಗಿದೆ. ಕೊಡಗಿನ ರೈತರಿಗೆ ವಿನಾಯಿತಿ ಕೊಡಬೇಕು, ಯಾವುದೇ ಕಾರಣದಿಂದ ಅವರಿಗೆ ಕಡ್ಡಾಯ ಮಾಡಬಾರದು. ಅವರು ಭತ್ತವನ್ನು ತೆಗೆದುಕೊಂಡು ಹೋಗಿ ಅಕ್ಕಿ ಮಾಡಿಸಲಿಕ್ಕೆ ಸೂಚನೆ ಕೊಡಬೇಕು. ಹಿಂದೆ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಗೆ ಒಂದು ವಿನಾಯಿತಿ ತೋರಿಸಿದ್ದರು. ರೈತರು ಲೆವಿ ಕೊಟ್ಟ ಮೇಲೆ ಅವರಿಗೆ ಬೇಕಾದಷ್ಟು ಭತ್ತವನ್ನು ಅಕ್ಕಿ ಮಾಡಿಸಿಕೊಳ್ಳಲಿಕ್ಕೆ, ಸೊಸೈಟಿಗಳಲ್ಲಿ ಮಾರಲಿಕ್ಕೆ ಯಾವ ತೊಂದರೆಯೂ ಬಾರದ ರೀತಿ ಹಿಂದೆ ವಿನಾಯಿತಿ ಕೊಟ್ಟದ್ದು ಸರ್ಕಾರವ ಗಮನದಲ್ಲಿದೆಯೆ ?

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಸದಸ್ಯರ ಕಳಕಳಿ ಸರ್ಕಾರದ ಗಮನಕ್ಕೆ ಬಂದಿದೆ ಮೊದಲು 2 ಕ್ವಿಂಟಾಲ್ ಮಾತ್ರ ಅಕ್ಕಿ ಮಾಡಿಸಿಕೊಳ್ಳುತ್ತಿದ್ದರು. ಈಗ 5 ಕ್ವಿಂಟಾಲ್‌ಗಳವರೆಗೆ ಭತ್ತವನ್ನು ಅಕ್ಕಿ ಮಾಡಿಸಿಕೊಳ್ಳಲಿಕ್ಕೆ ಅವಕಾಶ ಕೊಡಲಾಗಿದೆ. ವಿಲೇಜ್ ಅಕೌಂಟೆಂಟ್‌ಗಳಿಂದ ತೊಂದರೆಯಿದೆ ಎಂದು ಹೇಳಿದರು, ಈಗ ತಿಂಗಳಿಗೆ 5 ಕ್ವಿಂಟಾಲ್‌ನಂತೆ 6 ತಿಂಗಳಿಗೆ 35 ಕ್ವಿಂಟಾಲ್ ಭತ್ತವನ್ನು ಅಕ್ಕಿ ಮಾಡಿಸಿಕೊಳ್ಳಲಿಕ್ಕೆ ಕಾನೂನು ಜಾರಿಗೆ ಬರುತ್ತದೆ.ಈಗ ಯಾವ ತೊಂದರೆಯೂ ಆಗುವುದಿಲ್ಲ.

ವಿಷಯ : ಕಾರದಗಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯ ಹುದ್ದೆ ಖಾಲಿ.

ಪ್ರಶ್ನೆ : 233(708) ಶ್ರೀ ಎ. ಎ. ನಿಂಬಾಳಕರ್ (ಸಡಲಗಾ). —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಪ್ರಾಥಮಿಕ ಆರೋಗ್ಯ ಕೇಂದ್ರ, ಕಾರಗದ ಇಲ್ಲಿಯ ವೈದ್ಯಾಧಿಕಾರಿ ಹುದ್ದೆ ಖಾಲಿ ಇದೆಯೆ;

ಆ) ಹಾಗಿದ್ದಲ್ಲಿ ಯಾವಾಗಿನಿಂದ ಖಾಲಿ ಇದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಪ್ರಶ್ನೆಗಳಿಗೆ ಉತ್ತರಿಸುವರು :— ಅ) ಖಾಲಿ ಇದೆ. ಆ) 1983ರ ಜುಲೈಯಿಂದ.

Sri A. A. Nimbalkar.— Speaker Sir, why no action was taken to fill up the vacancies immediately in spite of my request ? What action now the Hon. Minister proposes to take in this regard ?

ಶ್ರೀ ಪಿ. ಜಿ. ಆರ್ ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು). — ಮಾನ್ಯ ಅಧ್ಯಕ್ಷರೇ, ದಿನಾಂಕ 9-1-1984ರಲ್ಲಿ ಲೋಕಸೇವಾ ಆಯೋಗದಿಂದ ನಾವು ನೇಮಕ ಮಾಡಿರುವಂತಹ ವೈದ್ಯರ ಪೈಕಿ ಒಬ್ಬರನ್ನು ಕಾರಗದಲ್ಲಿ ನೇಮಕ ಮಾಡಿದ್ದೇವೆ. ಅಲ್ಲಿ ಮಹಿಳಾ ವೈದ್ಯರ ಜಾಗ ಮಾತ್ರ ಖಾಲಿ ಇದೆ. ಪುರುಷ ವೈದ್ಯರನ್ನು ಈಗಾಗಲೇ ನೇಮಿಸಿದ್ದು, ಮಹಿಳಾ ವೈದ್ಯರನ್ನು ನೇಮಕ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

Sri A. A Nimbalkar.— Speaker Sir, Can the Minister explain in English to me ?

Mr Speaker.— He says that he has already filled up the post or male doctor on 9th January and he said he would take action in regard to posting of female doctor

ವಿಷಯ : ಕರ ತೆರಿಗೆ ವಿಷಯಗಳಿಗೆ ಅಪೀಲು ಮಂಡಲಿ ಬಗ್ಗೆ.

ಪ್ರಶ್ನೆ : 234(510) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರವು ಈಗಿರುವ ಕರ್ನಾಟಕ ಅಪೀಲು ನ್ಯಾಯ ಮಂಡಲಿಗೆ ಬದಲಾಗಿ ಹಳೆಯ ಕರ್ನಾಟಕ ಕರ ತೆರಿಗೆ ಅಪೀಲು ನ್ಯಾಯ ಮಂಡಲಿಯನ್ನು ಪೂರ್ವ ಸ್ಥಿತಿಗೆ ತರುತ್ತದೆಯೆ ;

ಆ) ದಾವಣಗೆರೆ ಕರ ತೆರಿಗೆ ವಿಭಾಗವನ್ನು ಸೃಷ್ಟಿಸಲಾಗಿದೆಯೆಂಬುದು ಸಂತ್ಯಾಂಶವೆ ;

ಇ) ಹಾಗಾದರೆ, ಎಲ್ಲಾ ಕೆಲಸವನ್ನು ಆದಕ್ಕೆ ವಹಿಸಿಕೊಡಲಾಗಿದೆಯೆ ;

ಈ) ಹಾಗಿಲ್ಲವಾದರೆ, ಅದಕ್ಕೆ ಕಾರಣಗಳೇನು ?

ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿ).— ಅ) ಇಲ್ಲ.

ಆ) ಹೌದು. ಇ) ಹೌದು. ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಆನಂದರಾವ್.— ನನ್ನ ತಿಳುವಳಿಕೆ ಪ್ರಕಾರ, ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಆರ್ಥಿಕ ಮಂತ್ರಿಗಳಾಗಿದ್ದಾಗ ಈ ಕರ್ನಾಟಕ ಸೇಲ್ಸ್ ಟ್ಯಾಕ್ಸ್ ಅಪಲೇಟ್ ಟ್ರಿಬೂನಲ್ ಮಾಡಿದ್ದು ಎಂದು ತಿಳಿದುಕೊಂಡಿದ್ದೇನೆ. 1976ರಲ್ಲಿ ಕರ್ನಾಟಕ ಕೋ ಆಪರೇಟಿವ್ ಅಪಲೇಟ್ ಟ್ರಿಬ್ಯೂನಲ್, ಕರ್ನಾಟಕ ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ ಮತ್ತು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್ ಈ ಮೂರನ್ನೂ ರದ್ದುಗೊಳಿಸಿ ಈಗಿರುವ ಕರ್ನಾಟಕ ಸೇಲ್ಸ್ ಟ್ಯಾಕ್ಸ್ ಅಪಲೇಟ್ ಟ್ರಿಬ್ಯೂನಲ್ಲನ್ನು ಮಾಡಿ

ವ್ಯಾರೆ. ಈ ಕಾರಣದಿಂದಾಗಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಕೇಸುಗಳ ಜೊತೆಗೆ ಸೇಲ್ಸ್ ಟ್ಯಾಕ್ಸ್‌ಗೆ ಸಂಬಂಧಪಟ್ಟ ಕೇಸುಗಳು ಕೂಡ ಹೋಗಿ ಬೇಗ ತೀರುವಳಿ ಆಗುತ್ತಿಲ್ಲ. ಆದ್ದರಿಂದ ಈಗಲಾದರೂ ಪುನಃ ಮುಂಚೆ ಇದ್ದಂತೆ ಈ ಬೇರೆ ಬೇರೆ ಟ್ರಿಬ್ಯೂನಲ್‌ಗಳನ್ನು ರಚಿಸಲಾಗುತ್ತದೆಯೆ ?

ಎರಡನೇಯದು, ದಾವಣಗೆರೆಯಲ್ಲಿ ಸೇಲ್ಸ್ ಟ್ಯಾಕ್ಸ್ ಡಿವಿಜನ್‌ನನ್ನು ಮಾಡಿದ್ದೀರಿ. ಈಗ ಶಿವಮೊಗ್ಗ ಜಿಲ್ಲೆಯಲ್ಲಿರುವ ಸೇಲ್ಸ್ ಟ್ಯಾಕ್ಸ್ ಕೇಸುಗಳು ಏನಿವೆ, ಮಂಗಳೂರು, ಬೆಂಗಳೂರು ಮತ್ತು ಮೈಸೂರಿಗೂ ಕೂಡ ಇತ್ಯರ್ಥಕ್ಕಾಗಿ ಹೋಗಬೇಕಾಗಿವೆ. ದಾವಣಗೆರೆಯ ವ್ಯಾಪ್ತಿಯೊಳಗೆ ಶಿವಮೊಗ್ಗದಲ್ಲಿಯೇ ಕೇಸುಗಳ ತೀರುವಳಿ ಆಗಲಿಕ್ಕೆ ಏರ್ಪಾಡನ್ನು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.— ಮೊದಲನೇ ಪ್ರಶ್ನೆಗೆ ಉತ್ತರವಾಗಿ ಅಧ್ಯಕ್ಷರೇ, ಹಿಂದೆ 1976ನೇ ಇಸವಿಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿರತಕ್ಕಂತ ಪದ್ಧತಿಯನ್ನು ಗಣನೆಗೆ ತೆಗೆದುಕೊಂಡು ಒಂದು ನಿರ್ಣಯವನ್ನು ತಂದಿದ್ದಾರೆ ಎಂದು ನನ್ನ ಭಾವನೆ. ಈಗಿರುವ ನ್ಯಾಯ ಮಂಡಲಿಯ ಬದಲಾಗಿ ಹಳೆಯ ಕರ್ನಾಟಕ ಕರ ತೆರಿಗೆ ಅಪೀಲು ನ್ಯಾಯ ಮಂಡಳಿಯನ್ನು ಮಾಡತಕ್ಕಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಇದರ ಹೊರತಾಗಿ ಆಡಳಿತಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಕರ್ಮಚಾರಿಗಳಿಗೆ ಸಂಬಂಧಪಟ್ಟಂತೆಯೇ ಒಂದು ಪ್ರತ್ಯೇಕವಾದ ಟ್ರಿಬ್ಯೂನಲ್‌ನ್ನು ಮಾಡಬೇಕೆಂದು ಈ ಸರ್ಕಾರ ಯೋಜನೆ ಮಾಡುತ್ತಿದೆ. ಮಾನ್ಯ ಆನಂದರಾವ್ ಅವರು ಶಿವಮೊಗ್ಗ ಜಿಲ್ಲೆಯಲ್ಲಿ ಬೆಂಚನ್ನು ಮಾಡಬೇಕೆಂದು ಹೇಳಿದ್ದಾರೆ. ಇಲ್ಲಿಯವರೆಗೆ ಎರಡು ಬೆಂಚ್‌ಗಳು ಇದ್ದವು. ಒಂದು ಗುಲ್ಬರ್ಗದಲ್ಲಿ, ಇನ್ನೊಂದು ಮೈಸೂರಿನಲ್ಲಿ. ಬಳ್ಳಾರಿ, ಶಿವಮೊಗ್ಗ ಚಿತ್ರದುರ್ಗ ಈ ಜಿಲ್ಲೆಗಳ ಜನರಿಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದಲೇ ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ—ಈ ಮೂರು ಜಿಲ್ಲೆಗಳನ್ನು ಬೇರೆ ಬೇರೆ ವಿಭಾಗಗಳಿಗೆ ಸೇರಿಸುವುದನ್ನು ತೆಗೆದು ಈ ಮೂರು ಜಿಲ್ಲೆಗಳಿಗೂ ಅನ್ವಯಿಸತಕ್ಕಂಥ ಹೊಸ ಬೆಂಚ್‌ನ್ನು ಚಿತ್ರದುರ್ಗದಲ್ಲಿ ಮಾಡಿದ್ದೇವೆ. ಇದರ ಉಪಯೋಗ ಜನರಿಗೆ ಆಗಬೇಕೆಂದು ಮತ್ತು ಆದಷ್ಟು ಬೇಗ ಕೇಸುಗಳು ಇತ್ಯರ್ಥವಾಗಬೇಕೆಂಬುದು ನಮ್ಮ ಉದ್ದೇಶ. ಬಳ್ಳಾರಿಯೂ ಇದರಲ್ಲಿ ಸೇರಿರುವುದರಿಂದ, ಒಂದು ಕಡೆ ಶಿವಮೊಗ್ಗ, ಇನ್ನೊಂದು ಕಡೆ ಬಳ್ಳಾರಿ ಮಧ್ಯೆ ಚಿತ್ರದುರ್ಗ ಬರುತ್ತದೆ. ಆದ್ದರಿಂದ ದಾವಣಗೆರೆಯಲ್ಲಿ ಇದನ್ನು ಮಾಡಿದರೆ ಎಲ್ಲರಿಗೂ ಇದರಿಂದ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ.

ಶ್ರೀ ಎಂ. ಆನಂದರಾವ್.—ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆಯನ್ನು ನಾನು ಬಹಳ ದಿವಸಗಳಿಂದಲೂ ಕೇಳುತ್ತಿದ್ದೇನೆ. ಶಿವಮೊಗ್ಗದಲ್ಲಿ ಕಳ್ಳಸಾಗಾಣಿಕೆ ಪ್ರಯತ್ನಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿರುವುದರಿಂದ ಶಿವಮೊಗ್ಗದಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ (ಇಂಟಲಿಜೆನ್ಸ್) ಇವರ ಸಬ್ ಆಫೀಸ್‌ನ್ನು ತೆಗೆಯುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ. –ಮೊದಲು ಇಂಟಲಿಜೆನ್ಸ್ ಡಿಪ್ಯೂಟಿ ಕಮೀಶನರ್ ಅವರ ಕಛೇರಿ ಶಿವಮೊಗ್ಗದಲ್ಲಿ ಇದ್ದದ್ದು ನಿಜ. ಆದರೆ ಅವರ ವ್ಯಾಪ್ತಿ ಈಮೂರು ಜಿಲ್ಲೆಗಳಲ್ಲಿದ್ದು ಹೆಡ್‌ಕ್ವಾರ್ಟರ್ಸ್ ಮಧ್ಯದಲ್ಲಿ ಇರತಕ್ಕದ್ದು ಒಳ್ಳೆಯದು ಎಂದು ಭಾವಿಸಲಾಗಿತ್ತು. ಈಗ ಅಲ್ಲಿ ಮಾನ್ಯ ಆನಂದರಾಯರು ಹೇಳಿದ ಹಾಗೆ ಅವರ ಜಿಲ್ಲೆಯಲ್ಲಿ ಹೆಚ್ಚು ಕಳ್ಳಸಾಗಾಣಿಕೆ ಆಗಿದ್ದರೆ, ಇದಕ್ಕೆ ಗಮನ ಕೊಡೋಣ.

ವಿಷಯ : ಮಂಗಳೂರು ಹಳೇ ಬಂದರು ಅಭಿವೃದ್ಧಿ ಬಗ್ಗೆ.—

ಪ್ರಶ್ನೆ : 236 (498) ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಮಾನ್ಯ ವಿಾನುಗಾರಿಕೆ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಹಳೇ ಬಂದರನ್ನು ವಿಾನುಗಾರಿಕಾ ಬಂದರಾಗಿ ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರದವರ ಮುಂದೆ ಇದೆಯೆ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ನೀಲಿ ನಕಾಶೆಯನ್ನು ತಯಾರಿಸಲಾಗಿದೆಯೆ ;

ಇ) ಸದರಿ ಯೋಜನೆಗೆ ತಗಲುವ ವೆಚ್ಚವೆಷ್ಟು ?

ಉತ್ತರ : ಶ್ರೀ ರಾಜವರ್ಧನ್ (ವಿಾನುಗಾರಿಕೆ ರಾಜ್ಯ ಸಚಿವರು).— ಅ) ಇದೆ.

ಆ) ಹೌದು. ಇ) ರೂ. 99. 95. 000–00.

ಶ್ರೀ ವಿ. ಧನಂಜಯ ಕುಮಾರ್.—ಈ ಒಂದು ಯೋಜನೆಗೆ ಕೇಂದ್ರ ಸರ್ಕಾರದಿಂದ ನೆರವು ಸಿಗುವುದು ಇದೆ. ಹಾಗಿದ್ದಲ್ಲಿ ಎಷ್ಟು ನೆರವು ಕೇಂದ್ರ ಸರ್ಕಾರದಿಂದ ಸಿಗುವ ಯೋಚನೆ ಇದೆ ?

ಶ್ರೀ ರಾಜವರ್ಧನ್ (ವಿಾನುಗಾರಿಕೆ ರಾಜ್ಯ ಸಚಿವರು) .—ಈಗಾಗಲೇ ಇದರ ಬಗ್ಗೆ ಶಿಫಾರಸ್ಸುಗಳನ್ನು ಕಳಿಸಿದ್ದು ಕೇಂದ್ರ ಸರ್ಕಾರದಿಂದ 99ಲಕ್ಷ 95ಸಾವಿರ ರೂಪಾಯಿಗಳನ್ನು ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ವಿ. ಧನಂಜಯ ಕುಮಾರ್.—ಹಾಗಿದ್ದಲ್ಲಿ ಮಂಗಳೂರಿನ ಹಳೇ ಬಂದರನ್ನು ವಿಾನುಗಾರಿಕಾ ಬಂದರಾಗಿ ಯಾವಾಗ ಅಭಿವೃದ್ಧಿ ಪಡಿಸಲಿಕ್ಕೆ ಸಾಧ್ಯವಿದೆ ? ಇನ್ನೆಷ್ಟು ಸಮಯದೊಳಗೆ, ಯಾವ ವರ್ಷದಲ್ಲಿ ಇದನ್ನು ಮಾಡಬಹುದು ?

ಶ್ರೀ ರಾಜವರ್ಧನ್.—ಈಗ ಇದು ಕೇಂದ್ರ ಸರ್ಕಾರಕ್ಕೆ ಹೋಗಿದೆ. ಅಲ್ಲಿಂದ ಸಹಾಯ ಬಂದ